"ಥಾಮಸ್."

"ಸರಿ, ಇಲ್ಲಿ ದೆವ್ವ ಇದೆ ಅಂದ್ಯಲ್ಲ? ಅದು ಯಾರಿಗಾದ್ರೂ ತೊಂದ್ರೆ ಮಾಡಿದೆಯಾ?"

"ಇಲ್ಲ ಸಾರ್. ಕೆಲವರು ಮಾತ್ರ ಹೆದರಿ ರಾತ್ರೋರಾತ್ರಿ ರೂಮು ಖಾಲಿ ಮಾಡಿದ್ದಾರೆ. ಬಹುಶಃ ಅದು ತುಂಬಾ ಒಳ್ಳೆ ದೆವ್ವಾಂತ ಕಾಣುತ್ತೆ."

ಅವನು ನಕ್ಕು ಆಚೆ ಹೋದ.

ರೋಹಿತ್ ಬಟ್ಟೆ ಬದಲಿಸಿ ಸ್ನಾನಕ್ಕೆ ಹೋದ. ಮೈಮೇಲೆ ಬಿಸಿ ನೀರು ಬೀಳುತ್ತಲೇ ಮೈಗೆ ಹಿತವೆನಿಸಿತು. ಬೆಳಿಗ್ಗಿನಿಂದ ಬಸ್ಸಿನಲ್ಲಿ ಕೂತು ಶರೀರ ನುಜ್ಜುಗುಜ್ಜಾಗಿತ್ತು. ಅದೂ ಕೆಲವು ಕಡೆ ನಿಗದಿಗಿಂತ ಹೆಚ್ಚಿನ ಹೊತ್ತು ನಿಂತು, ಮತ್ತೆಲ್ಲೋ ಟೈರ್ ಪಂಕ್ಚರ್ ಆಗಿ ಅಂತೂ ಸರಿರಾತ್ರಿ ಹನ್ನೊಂದಕ್ಕೆ ಬೆಂಗಳೂರು ತಲುಪಿತ್ತು. ಮೈಗೆ ಹಾಯೆನಿಸುತ್ತಾ ಮನಸ್ಸೂ ಚಿಂತನೆಗೆ ತೊಡಗಿತು. ಅಲ್ಲಾ ಈ ವೈಜ್ಞಾನಿಕ ಯುಗದಲ್ಲಿ ಜನ ದೆವ್ವ ನಂಬ್ತಾರಲ್ಲ? ಎಂತಾ ಹುಚ್ಚರು? ಪಾಪ ಯಾವುಯಾವುದೋ ಕಷ್ಟಕಾರ್ಪಣ್ಯಗಳಿಂದ, ಅನಾರೋಗ್ಯದಿಂದ, ಸಂಬಂಧಗಳು ಕೆಟ್ಟಿದ್ದರಿಂದ, ಶೋಷಣೆಗೆ ಒಳಗಾಗಿರುವುದರಿಂದ ಹೀಗೆ ನಾನಾ ಪರಿಸ್ಥಿತಿಗಳಲ್ಲಿ ಸಿಕ್ಕು ಹೊರಬರುವ ಮಾರ್ಗ ಕಾಣದೆ ಜನರು ಜೀವನ ಕೊನೆಗಾಣಿಸ್ತಾರೆ. ಹೀಗೆ ಸತ್ತವರೆಲ್ಲಾ ದೆವ್ವಗಳಾಗೋ ಹಾಗಿದ್ದರೆ ಭೂಮಿಯ ಮೇಲೆ ನಿಲ್ಲೋಕೆ ಇಂಚು ಜಾಗವೂ ಸಿಗುತ್ತಿರಲಿಲ್ಲ! ಹಾಗೆ ನೋಡಿದರೆ ಕೊಲೆಯಾದವರು ದೆವ್ವ ಆಗಲೇಬೇಕು. ಕೊಲೆ ಮಾಡಿದವರ ಮೇಲೆ ಸೇಡು ತೀರಿಸಿಕೊಳ್ಳೋಕೆ ದೆವ್ವವಾಗಿ ಕಾಡಬೇಕು. ಆದರೆ ಕೊಲೆ ಮಾಡಿದವರು ರಾಜಾರೋಷಾಗಿ ಬದುಕುತ್ತಾರೆ! ರಸ್ತೆಗಳಲ್ಲಿ ಅಪಘಾತದಿಂದ ಸತ್ತವರು ರಸ್ತೆಗಳಲ್ಲೇ ದೆವ್ವವಾಗಿ ಕಾಡಬೇಕಿತ್ತು! ಆದರೆ ಹಾಗಾಗುವುದಿಲ್ಲ. ಅಂದರೆ ದೆವ್ವ ನಮ್ಮ ಕಲ್ಪನೆ! ದುರ್ಬಲ ಮನಸ್ಸುಗಳನ್ನು ಕಾಡುವ ಕಲ್ಪನೆ!

ರೋಹಿತ್ ಇಡೀ ದಿನ ಪ್ರಯಾಣ ಮಾಡಿ ಬೆಂಗಳೂರಿಗೆ ಬಂದಿದ್ದ. ಬೀದರಿನ ಕಾಲೇಜಿನಲ್ಲಿ ಅಧ್ಯಾಪಕನಾಗಿ ಕೆಲಸ ಮಾಡುತ್ತಿದ್ದ. ತನ್ನ ಹುಟ್ಟೂರು ದಾವಣಗೆರೆಗೆ ವರ್ಗ ಮಾಡಿಸಿಕೊಳ್ಳಲು ಪುಢಾರಿಯೊಬ್ಬನನ್ನು ಹಿಡಿದಿದ್ದ. ಅದಕ್ಕೆ ಕಾರಣ ಅಪ್ಪನ ಅನಾರೋಗ್ಯ. ಎರಡು ವರ್ಷಗಳ ಹಿಂದೆಯೇ ಕಿಡ್ನಿ ತೊಂದರೆಯಿಂದ ಬಳಲುತ್ತಿದ್ದರು. ಒಂದು ಕಿಡ್ನಿ ಹಾಳಾಗಿತ್ತು. ಮೂರು ದಿನಕ್ಕೊಮ್ಮೆ ಡಯಾಲಿಸಿಸ್ ಮಾಡದಿದ್ದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿತ್ತು. ರಕ್ತದೊತ್ತಡದಿಂದ ಬಳಲುತ್ತಿದ್ದ ಅಮ್ಮ ಬೇರೆ. ರೋಹಿತ್ ಒಬ್ಬನೇ ಮಗ. ಮನೆಗೆ ದಿಕ್ಕುದೆಸೆ ಅವನೇ. ಅವನ ಅಗತ್ಯ ಸಂಸಾರಕ್ಕೆ ಅನಿವಾರ್ಯವಾಗಿತ್ತು. ಎಲ್ಲ ಒತ್ತಡಗಳ ನಡುವೆ ಕಳೆದ ವರ್ಷ ಮದುವೆಯೂ ಆಗಿತ್ತು. ಸರ್ಕಾರಿ ಕೆಲಸ ಬಿಡಲಾರದೆ ಮಡದಿಯ ಜೊತೆ ಬೀದರಿನ ಕೆಲಸಕ್ಕೆ ಹೋಗಿದ್ದ. ಹೋದ ಕ್ಷಣದಿಂದಲೇ ವರ್ಗಕ್ಕೆ ಪ್ರಯತ್ನಿಸುತ್ತಿದ್ದ. ಲಕ್ಷದ ಮೇಲೆ ಹಣ ಕೈಬಿಟ್ಟಿತ್ತು. ವರ್ಗ ಮಾತ್ರ ಆಗಿರಲಿಲ್ಲ. ಪುಢಾರಿ ಏನೇನೋ ಕಾರಣಗಳೊಡ್ಡಿ ಮತ್ತೆ ಮತ್ತೆ ಹಣ ಕೇಳುತ್ತಿದ್ದ. ರೋಹಿತ್ ಇನ್ನು ತನ್ನಿಂದ ಹಣ ಕೊಡಲಾಗುತ್ತಿಲ್ಲ ಎನ್ನತೊಡಗಿದಾಗ ಜಾರಿಕೊಳ್ಳುತ್ತಿದ್ದ! ಮತ್ತೆ ಪುಢಾರಿಯನ್ನು ಭೇಟಿ ಮಾಡಿ ವರ್ಗಾ ಮಾಡಿಸು ಇಲ್ಲ ಹಣ ವಾಪಸ್ಸು ಕೇಳಬೇಕೆಂಬ ದೃಢ ನಿರ್ಧಾರದೊಂದಿಗೆ ಬೆಂಗಳೂರಿಗೆ ಬಂದಿದ್ದ. ಅಸೆಂಬ್ಲಿ ಸೆಷನ್ ನಡೆಯುತ್ತಿದ್ದುದರಿಂದ ಅವನು ಖಂಡಿತಾ ಸಿಗುತ್ತಾನೆಂಬ ಭರವಸೆಯಿತ್ತು.

ದಣಿದಿದ್ದ ರೋಹಿತ್ ರೂಮ್‌ಬಾಯ್ ಹೇಳಿದ ದೆವ್ವದ ವಿಷಯಕ್ಕೆ ಹೆದರಿರಲಿಲ್ಲ. ಭೂತ ದೆವ್ವಗಳು ಇರಲು ಸಾಧ್ಯವೇ ಇಲ್ಲ ಎಂಬ ನಂಬಿಕೆ ಅವನದು. ಕಣ್ಣಿಗೆ, ಪ್ರಜ್ಞೆಗೆ